**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು**
**ಜೆ.ಎಂ.ಎಫ್.ಸಿ. ಕನಕಪುರ.**

CC No.802/2020

CW -1 PW -1

| | | |
|---|---|---|
| ಹೆಸರು | ಃ | ರಾಮಚಂದ್ರೇಗೌಡ |
| ತಂದೆಯ ಹೆಸರು | ಃ | ವೆಂಕಟೇಗೌಡ |
| ವಯಸ್ಸು | ಃ | 59 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ | ಃ | ಮುರುಕಣಿ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 14.11.2022

13.12.2019 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ರಾತ್ರಿ ಕನಕಪುರದಿಂದ ಮನೆಗೆ ಹೋಗುತ್ತಿದ್ದ ಸಂದರ್ಭದಲ್ಲಿ ರಾಜು ಎನ್ನುವವರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ನಂತರ ಅದೇ ದಿನ ನಾನು ತಂಗಿ ಮನೆಗೆ ಹೋಗಿ ಬರುವಾಗ ಶಿವರಾಮೇಗೌಡ ಗಲಾಟೆ ತೆಗೆದು 1 ನೇ ಆರೋಪಿ ಜಗಳ ತೆಗೆದು ರಾಜು ಎನ್ನುವವರು ಕೈಯಿಂದ ಗುದ್ದಿರುತ್ತಾರೆ. ಆಗ ನನಗೆ ಪ್ರಜ್ಞೆ ತಪ್ಪಿರುತ್ತದೆ. ನಂತರ ಚಾಸಾ-2 ಮತ್ತು 3 ರವರು ಕನಕಪುರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಬೆಂಗಳೂರಿಗೆ ಕಳುಹಿಸಿಕೊಟ್ಟಿರುತ್ತಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ 5 ದಿನ ಚಿಕಿತ್ಸೆ ಪಡೆದಿರುತ್ತೇನೆ.

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕನಕಪುರ ಗ್ರಾಮಾಂತರ ಪೋಲಿಸರು ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. 13.12.2019 ರಂದು ಬೆಳಿಗ್ಗೆ 11.30 ಕ್ಕೆ ಕನಕಪುರ ಗ್ರಾಮಾಂತರ ಪೋಲಿಸರು ಕೃತ್ಯ ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸಿರುತ್ತಾರೆ. ಆ ದಿನ ನನಗೆ ಹೊಡೆದ ವ್ಯಕ್ತಿಗಳು ನ್ಯಾಯಾಲಯದ ಮುಂದಿರುವ ಆರೋಪಿಗಳಾಗಿರುತ್ತಾರೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿ ಸ್ಥಳ ಮಹಜರ್ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಅನುಮತಿಸಲಾಯಿತು).

<u>ಪಾಟೀ ಸವಾಲು : ಎಪಿಪಿ ಯವರಿಂದ :</u>

ದಿನಾಂಕಃ 13.12.2019 ರಂದು 5.45 ಗಂಟೆ ಸಮಯದಲ್ಲಿ ನನಗೆ ಹುಷಾರಿಲ್ಲದ ಕಾರಣ ವರದಮ್ಮನ ಕ್ಲಿನಿಕ್ ನಲ್ಲಿ ಚಿಕಿತ್ಸೆ ಪಡೆದುಕೊಂಡು ರಾತ್ರಿ 8.00 ಗಂಟೆಯಲ್ಲಿ ಬಸ್ ಹತ್ತಿಕೊಂಡು ನಮ್ಮ ಗ್ರಾಮಕ್ಕೆ 8.45 ಕ್ಕೆ ನಮ್ಮ ಮನೆಯ ಕಡೆ ಹೋಗುವಾಗ ರವಿ ಗೌಡರ ಮನೆಯ ಹತ್ತಿರ ರಾಜು

ಎನ್ನುವವರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. 2 ನೇ ಆರೋಪಿಯು ನನಗೆ ಬೆನ್ನಿನ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿ.

ದಿನಾಂಕ 27.02.2020 ರಂದು ಕನಕಪುರ ಗ್ರಾಮಾಂತರ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ಯಾವುದೇ ಮರು ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

ಪಾಟೀ ಸವಾಲು ಃ ಆರೋಪಿ ಪರ Sri. A.R.K. ವಕೀಲರಿಂದಃ

ಚಾಸಾ-5 ನನ್ನ ತಂಗಿ ಮಗ. ಚಾಸಾ-5 ರವರಿಗೆ ಡೈರಿಯಲ್ಲಿ ಕೆಲಸಕ್ಕಾಗಿ ಪ್ರಯತ್ನ ಮಾಡುತ್ತಿದ್ದರು ಎಂದರೆ ಸರಿ. 1 ನೇ ಆರೋಪಿ ರಾಜು ಹಾಲಿನ ಡೈರಿಯಲ್ಲಿ ಕಾರ್ಯದರ್ಶಿ ಯಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ರಾಜು ಮತ್ತು ಚಾಸಾ-5 ರವರಿಗೆ ಕೆಲಸದ ವಿಷಯದಲ್ಲಿ ವೈವನಸ್ಸು ಇತ್ತು ಎಂದರೆ ಸರಿಯಲ್ಲ. ಚಾಸಾ-5 ರವರಿಗೆ ಕೆಲಸ ಕೊಡಿಸಲು ಪ್ರಯತ್ನಿಸಿ ವಿಫಲರಾದ್ದುದರಿಂದ ನನಗೂ ಮತ್ತು ಆರೋಪಿತರ ವಿರುದ್ಧ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ.

ಚಾಸಾ-2 ರಿಂದ 5 ನನ್ನ ಕುಲಬಾಂಧವರು ಎಂದರೆ ಸರಿ. ದಿನಾಂಕ 13.12.2019 ರಂದು ರಾತ್ರಿ 9.30 ರಲ್ಲಿ ಬೀದಿಯಲ್ಲಿ ಗಲಾಟೆ ಪ್ರಾರಂಭವಾಯಿತು. ಗಲಾಟೆಯಾದಾಗ ಕತ್ತಲೆಯಿಂದ ಕೂಡಿತ್ತು. ಆರೋಪಿಯ ಮನೆಯ ಅಕ್ಕಪಕ್ಕ ಮನೆಗಳು ಇರುತ್ತವೆ ಎಂದರೆ ಸರಿ. ಸಾಕ್ಷಿದಾರರಾಗಿ ಅಕ್ಕ ಪಕ್ಕದ ಮನೆಯವರನ್ನು ಸೇರಿಸಿರುವುದಿಲ್ಲ. ರಾತ್ರಿ 9.30 ರಿಂದ 10.00 ಗಂಟೆಯವರೆಗೆ ಗಲಾಟೆ ನಡೆದಿರುತ್ತದೆ. 2 ನೇ ಆರೋಪಿಯು ನನ್ನನ್ನು ಹಿಡಿದುಕೊಂಡು ರಾಜು ಎನ್ನುವವರು ನನಗೆ

ಹೊಡೆದಿರುತ್ತಾರೆ. ರಾಜು ಘಟನೆ ದಿನ ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ರಾಜು ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಎದೆಯ ಎಡಭಾಗದ ಕಿಬ್ಬರಿಗೆ ಒಂದು ಏಟನ್ನು ಕೈಯಲ್ಲಿ ಕಲ್ಲನ್ನು ಹಿಡಿದುಕೊಂಡು ಗುದ್ದಿರುತ್ತಾರೆ. ಕಲ್ಲನ್ನು ಪೋಲಿಸರು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಘಟನೆ ಆದಾಗ ಸುಮಾರು 30-40 ಜನ ಸೇರಿದ್ದರು. 30-40 ಜನ ಇದ್ದುದ್ದರಿಂದ ಯಾವ ವ್ಯಕ್ತಿ ನಿದಿರ್ಷ್ಟವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ.

ಘಟನೆ ನಡೆದ ದಿನವೇ ನಾನು ಠಾಣೆಗೆ ಹೋಗಿ ದೂರನ್ನು ನೀಡಿರುವುದಿಲ್ಲ ಸಾಕ್ಷಿ ಮುಂದುವರೆದು ಅವರು ನನ್ನ ವಿರುದ್ಧ ದೂರನ್ನು ಮೊದಲು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಘಟನೆ ಆದ 3 ದಿನದ ನಂತರ ದೂರನ್ನು ನೀಡಿರುತ್ತೇವೆ ಎಂದರೆ ಸರಿ. ನಿಪಿ-1 ಅನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ಘಟನೆಯಾದ ದಿನವೇ ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ ರಾತ್ರಿ 11.00 ಗಂಟೆಗೆ ಬಂದಿರುತ್ತೇನೆ. ವೈದ್ಯರು ನನ್ನನ್ನು ಪರೀಕ್ಷಿಸಿ ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಪೋಲಿಸರು ಬಂದು ದಾಖಲೆಗಳನ್ನು ತೆಗೆದುಕೊಂಡು ಹೋಗಿರುತ್ತಾರೆ.

ದಿನಾಂಕ 19.12.2019 ರಂದು ಬೆಳಿಗ್ಗೆ 11.30 ಸಮಯದಲ್ಲಿ 3 ಜನ ಪೋಲಿಸರು ಸ್ಥಳಕ್ಕೆ ಬಂದಿರುತ್ತಾರೆ ಯಾರು ಮಹಜರ್ ಅನ್ನು

ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-2 ಕ್ಕೆ ಯಾರ್ಯಾರು ಸಾಕ್ಷಿದಾರರಾಗಿ ಸಹಿ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಘಟನಾ ಸ್ಥಳಕ್ಕೆ ಚಕ್ಕುಬಂಧಿ ಪೂರ್ವ-ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಪುಟ್ಟ ಅರಕೇಗೌಡರ ಮನೆ ಮತ್ತು ದಕ್ಷಿಣಕ್ಕೆ ರಾಮಕೃಷ್ಣೇಗೌಡರ ಮನೆ.

ನಾನು ನನ್ನ ತಂಗಿ ಮನೆಯಿಂದ ಮನೆಗೆ ಬರುತ್ತಿದ್ದಾಗ ಆರೋಪಿತರು ಅಡ್ಡ ಗಟ್ಟಿಸಿ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮತ್ತು ರಾಜು ಎನ್ನುವವರು ನನಗೆ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿತರಿಗೂ ಹಾಲಿನ ಡೈರಿಯ ಕಾರ್ಯದರ್ಶಿಯ ಹುದ್ದೆಯ ಸಲುವಾಗಿ ವೈಮನಸ್ಸು ಇದುದ್ದರಿಂದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಕನಕಪುರ**